ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 4, Jan-Feb 2022, Pp 1-5.**
**©*IIMRD*, Mysuru**
**www.iimrd.com**

# ಬೌದ್ಧ ಧಮ್ಮ ಮತ್ತು ಆರ್ಥಿಕ ಜೀವನ: ಒಂದು ಸಮಾಜಶಾಸ್ತ್ರೀಯ ಅಧ್ಯಯನ
## (ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಗ್ರಾಮಕ್ಕೆ ಸಂಬಂಧಿಸಿದಂತೆ)

**ದೊರೆಸ್ವಾಮಿ.ಕೆ.ಎನ್.[1] ಪ್ರೊ. ಚಂದ್ರಶೇಖರ್.[2]**

[1]ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಸಮಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.

[2]ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.

### ಸಾರಾಂಶ (Abstract)

*ಒಂದು ಧರ್ಮದ ಧಾರ್ಮಿಕ ನೀತಿಗಳು ಆ ಜನಾಂಗದ ಅಭಿವೃದ್ಧಿಗೆ ಅಡಿಪಾಯಗಳಾಗಿರುತ್ತವೆ. ಧಾರ್ಮಿಕ ವಿಧಿಗಳು ಹೇಗೆ ಮನುಷ್ಯನ ಧಾರ್ಮಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ರಾಜಕೀಯ ಕ್ಷೇತ್ರಗಳನ್ನು ಪ್ರಭಾವಿಸಬಲ್ಲವೋ ಅದೇ ರೀತಿ ಆರ್ಥಿಕ ಜೀವನವನ್ನು ಪ್ರಭಾವಿಸುತ್ತವೆ. ಉದಾಹರಣೆಗೆ ಮ್ಯಾಕ್ಸ್ ವೇಬರ್‌ರವರ 'ಪ್ರೊಟೆಸ್ಟೆಂಟ್ ಎಥಿಕ್ಸ್ ಅಂಡ್ ಸ್ಪಿರಿಟ್ ಆಫ್ ಕ್ಯಾಪಿಟಲಿಸಂ' ನಲ್ಲಿ ನಿರ್ದಿಷ್ಟ ಧಾರ್ಮಿಕ ನೈತಿಕತೆಗೆ ಆರ್ಥಿಕತೆಯ ಅಗತ್ಯ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಪರಿಶೋಧಿಸಿದರು. ಆಧುನಿಕ ಆರ್ಥಿಕ ವ್ಯವಸ್ಥೆಗಳಿಗೆ ನಿರ್ದಿಷ್ಟವಾಗಿ ಪ್ರೊಟೆಸ್ಟೆಂಟ್ ನೈತಿಕ ಧರ್ಮದ ಕೊಡುಗೆ ಏನು? ಎಂದು ವಿವೇಚಿಸಲು ಪ್ರಯತ್ನ ಮಾಡಿದ್ದಾನೆ. ವೇಬರ್ ತಿಳಿಸಿರುವಂತೆ ಮೊದಲನೆಯದಾಗಿ ಜನರ ಧಾರ್ಮಿಕ ದೃಷ್ಟಿಕೋನದ ಮೂಲಕ ಅವರ ಆರ್ಥಿಕ ಚಟುವಟಿಕೆಗಳನ್ನು ಒಳಗೊಂಡಂತೆ ಅವರ ಸಾಮಾನ್ಯ ವರ್ತನೆಯನ್ನು ಅರ್ಥಮಾಡಿಕೊಳ್ಳುವುದು ಸಾಧ್ಯ. ಎರಡನೆಯದಾಗಿ ಆರ್ಥಿಕ ವರ್ತನೆಯನ್ನು ನಿರ್ಧರಿಸುವ ಪ್ರಬಲ ಶಕ್ತಿಗಳು ಧಾರ್ಮಿಕ ಕಲ್ಪನೆಗಳು ಆರ್ಥಿಕ ಪರಿವರ್ತನೆಗೆ ಕಾರಣವಾಗಿದೆ ಹಾಗೂ ನೈತಿಕತೆ ಎಂಬುದು ಧಾರ್ಮಿಕ ಮನೋಭಾವದ ಒಂದು ಪ್ರಕಟಿತ ರೂಪ ಪ್ರೊಟೆಸ್ಟೆಂಟ್ ನೀತಿ ಸಂಹಿತೆಗಳು ಪ್ರೊಟೆಸ್ಟೆಂಟ್‌ರ ಆರ್ಥಿಕ ನಡವಳಿಯ ಮೇಲೆ ಪ್ರಭಾವ ಬೀರುವಂತೆ ಬೌದ್ಧ ಧಮ್ಮ ಸ್ವೀಕರಿಸಿರುವ ಬೌದ್ಧ ಉಪಾಸಕರ ಆರ್ಥಿಕ ಮತ್ತು ವೃತ್ತಿಜೀವನದ ಮೇಲೆ ಬೌದ್ಧ ಧಮ್ಮದ ತತ್ವಗಳು ಯಾವ ರೀತಿ ಪ್ರಭಾವವನ್ನು ಬೀರಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಬೌದ್ಧಧಮ್ಮ, ಅರ್ಥಿಕ ಜೀವನ, ಶಿಕ್ಷಣ, ಧಾರ್ಮಿಕ ಕಲ್ಪನೆಗಳು.*

### ಅಧ್ಯಯನದ ಪರಿಕಲ್ಪನೆ

ಪ್ರಸುತ್ತ ಅಧ್ಯಯನವು "ಬೌದ್ಧ ಧಮ್ಮ ಮತ್ತು ಆರ್ಥಿಕ ಜೀವನ"– ಒಂದು ಸಮಾಜಶಾಸ್ತ್ರೀಯ ಅಧ್ಯಯನ (ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆ ತಾಲೂಕಿನ ಅಂತರಸಂತೆ ಗ್ರಾಮಕ್ಕೆ ಸಂಬಂಧಿಸಿದಂತೆ)

*Please cite this article as: ದೊರೆಸ್ವಾಮಿ ಕೆ.ಎನ್. ಮತ್ತು ಪ್ರೊ. ಚಂದ್ರಶೇಖರ್. (2022). ಬೌದ್ಧ ಧಮ್ಮ ಮತ್ತು ಆರ್ಥಿಕತೆ: ಒಂದು ಸಮಾಜಶಾಸ್ತ್ರೀಯ ಅಧ್ಯಯನ (ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಗ್ರಾಮಕ್ಕೆ ಸಂಬಂಧಿಸಿದಂತೆ) ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ. 1–5.*

ಎಂಬ ವಿಷಯದ ಕುರಿತಾಗಿದ್ದು. ಧಮ್ಮದ ಅಂಶಗಳು ಆರ್ಥಿಕ ಜೀವನ ಶೈಲಿಯನ್ನು ಪ್ರಭಾವಿಸಬಲ್ಲವು ಎಂಬುದನ್ನು ಗಮನಿಸಬಹುದಾಗಿದೆ.

**ಬೌದ್ಧಧರ್ಮ ಮತ್ತು ಆರ್ಥಿಕ ಜೀವನ**

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಉಂಟಾದ ಸುಧಾರಣೆಗಳು, ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಗಳು ಜಾಗತೀಕರಣದ ಪ್ರಭಾವಗಳು ಸಾಂಪ್ರದಾಯಿಕ ವೃತ್ತಿ ಮತ್ತು ಆರ್ಥಿಕ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಬದಲಾಯಿಸಿವೆ. ಧರ್ಮವು ಕೂಡ ವ್ಯಕ್ತಿಯ ಆರ್ಥಿಕ ಜೀವನವನ್ನು ನಿಯಂತ್ರಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಪ್ರೊಟೆಸ್ಟೆಂಟರು ಧಾರ್ಮಿಕ ನೀತಿಗಳು ಹೇಗೆ? ಅವರ ಅಭಿವೃದ್ಧಿಗೆ ಕಾರಣವಾಗಿದೆಯೋ ಅದೇ ರೀತಿ ಬೌದ್ಧ ಧಮ್ಮದ ತತ್ವಾದರ್ಶಗಳು ಬೌದ್ಧ ಉಪಾಸಕರನ್ನು ಪ್ರಭಾವಿಸುವ ಮೂಲಕ ಅವರು ಮೊದಲು ಇದ್ದ ಆರ್ಥಿಕ ಸ್ಥಿತಿ ಮತ್ತು ವೃತ್ತಿಗಳನ್ನು ಹೇಗೆ ಪ್ರಭಾವಿಸಬಲ್ಲದು ಎಂಬುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ

**ಅಧ್ಯಯನದ ಮಹತ್ವ**

ಅಧ್ಯಯನ ವಿಷಯವಾದ ಬೌದ್ಧಧಮ್ಮ ಮತ್ತು ಆರ್ಥಿಕ ಜೀವನ–ಒಂದು ಸಮಾಜಶಾಸ್ತ್ರೀಯ ಅಧ್ಯಯನ (ವಿಶೇಷವಾಗಿ ಮೈಸೂರು ಜಿಲ್ಲೆಯ ಹೆಚ್. ಡಿ ಕೋಟೆ ತಾಲ್ಲೂಕಿನ ಅಂತರಸಂತೆ ಗ್ರಾಮಕ್ಕೆ ಸಂಬಂಧಿಸಿದಂತೆ) ಈ ಅಧ್ಯಯನದ ಮಹತ್ವವು ಈ ಕೆಳಗಿನಂತಿದೆ.

- ಬೌದ್ಧ ಧಮ್ಮದ ತತ್ವಗಳು ಬೌದ್ಧ ಉಪಾಸಕರ ಆರ್ಥಿಕ ಜೀವನವನ್ನು ಪ್ರಭಾವಿಸಿವೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.
- ಬೌದ್ಧ ಉಪಾಸಕರ ಬೌದ್ಧ ಧಮ್ಮ ಸ್ವೀಕಾರಕ್ಕೂ ಮೊದಲು ಮತ್ತು ನಂತರದ ಆರ್ಥಿಕ ಜೀವನದಲ್ಲಿ ಉಂಟಾಗಿರುವ ಬದಲಾವಣೆಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.
- ಬೌದ್ಧ ಉಪಾಸಕರ ವೃತ್ತಿಯಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಅಧ್ಯಯನ ಮಾಡಲಾಗಿದೆ.

**ಅಧ್ಯಯನದ ಕ್ಷೇತ್ರದ ವ್ಯಾಪ್ತಿ**

ಪ್ರಸ್ತುತ ಅಧ್ಯಯನವು 'ಬೌದ್ಧ ಧಮ್ಮ ಮತ್ತು ಆರ್ಥಿಕ ಜೀವನ–ಒಂದು ಸಮಾಜಶಾಸ್ತ್ರೀಯ ಅಧ್ಯಯನ' (ವಿಶೇಷವಾಗಿ ಮೈಸೂರು ಜಿಲ್ಲೆಯ ಹೆಚ್. ಡಿ ಕೋಟೆ ತಾಲ್ಲೂಕಿನ ಅಂತರಸಂತೆ ಗ್ರಾಮಕ್ಕೆ ಸಂಬಂಧಿಸಿದಂತೆ)ಎಂಬ ವಿಷಯವನ್ನು ಕುರಿತದ್ದಾಗಿದೆ. ಅಂತರಸಂತೆ ಗ್ರಾಮದ ವ್ಯಾಪ್ತಿಯಲ್ಲಿ ಬೌದ್ಧ ಧಮ್ಮವನ್ನು ಸ್ವೀಕಾರ ಮಾಡಿ 5 ವರ್ಷಕ್ಕೂ ಹೆಚ್ಚಾಗಿರುವ ಪುರುಷ ಬೌದ್ಧಉಪಾಸಕರನ್ನು ಒಳಗೊಂಡಿದೆ.

**ಅಧ್ಯಯನದ ಮಾದರಿ**

ಅಂತರಸಂತೆ ಗ್ರಾಮದಲ್ಲಿ ಬೌದ್ಧ ಧಮ್ಮವನ್ನು ಅನುಸರಿಸುತ್ತಿರುವ ಒಟ್ಟು 267 ಪುರುಷ ಬೌದ್ಧ ಉಪಾಸಕರು ಇದ್ದು ಇವರಲ್ಲಿ ನನ್ನ ಅಧ್ಯಯನದ ದೃಷ್ಟಿಯಿಂದ 50 ಪುರುಷ ಬೌದ್ಧ ಉಪಾಸಕರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಮುಖವಾಗಿ ಬೌದ್ಧ ಧಮ್ಮ ಸ್ವೀಕಾರದ ನಂತರ ಅವರ ಆರ್ಥಿಕ

ಜೀವನದಲ್ಲಿ ಉಂಟಾಗಿರುವ ಬದಲಾವಣೆಗಳನ್ನು ತಿಳಿಯುವುದಾಗಿದೆ. ಉದ್ದೇಶಿತ ನಮೂನೆಯನ್ನು ಬಳಸಿಕೊಂಡು ಮಾದರಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಸಂಶೋಧನಾ ತಂತ್ರಗಳು**

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂದರ್ಶನ ಮತ್ತು ಸಂದರ್ಶನ ಅನುಸೂಚಿಯ ಸಹಾಯದಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅವಲೋಕನ ವಿಧಾನದಲ್ಲಿ ಸಹಭಾಗಿ ಅವಲೋಕನ ವಿಧಾನವನ್ನು ಬಳಕೆ ಮಾಡಿಕೊಳ್ಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಶೋಧನಾ ಆಕರಗಳಾದ ಸಂಶೋಧನಾ ಲೇಖನಗಳು, ಪತ್ರಿಕೆಗಳು, ಕನ್ನಡ ವಿಶ್ವಕೋಶ, ಕರ್ನಾಟಕ ರಾಜ್ಯ ಸರ್ಕಾರದ ಗೆಜೆಟಿಯರ್, ಅಂತರ್ಜಾಲ, ಸಂಶೋಧನಾ ಗ್ರಂಥಗಳು ಮತ್ತು ಸಂಶೋಧನಾ ಕ್ಷೇತ್ರದ ಪ್ರತಿವರ್ತಿಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ಸಂಶೋಧನಾ ತಂತ್ರಗಳ ಮೂಲಕ ಎಲ್ಲಾ ಅಂಶಗಳನ್ನು ಪರಿಗಣಿಸಿ ಮಾಹಿತಿಯನ್ನು ಸಮಾಜಶಾಸ್ತ್ರೀಯ ಚೌಕಟ್ಟಿನಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಬೌದ್ಧಧಮ್ಮ ಮತ್ತು ಆರ್ಥಿಕ ಜೀವನ**

ಬೌದ್ಧ ಧಮ್ಮದ ಸ್ವೀಕಾರದ ನಂತರ ಬೌದ್ಧ ಉಪಾಸಕರ ಆರ್ಥಿಕ ಜೀವನ ಶೈಲಿ ಮತ್ತು ವೃತ್ತಿಯಲ್ಲಿ ಆಗಿರುವ ಬದಲಾವಣೆಯ ಕ್ರಮವನ್ನು ಗುರುತಿಸಲಾಗಿದೆ.

ಕೋಷ್ಟಕ.0.1: ಆರ್ಥಿಕತೆಗೆ ಸಂಬಂಧಿಸಿದ ವಿವರ.

| ಆರ್ಥಿಕತೆಗೆ ಸಂಬಂಧಿಸಿದ ವಿವರ | ಬೌದ್ಧ ಧಮ್ಮ ಸ್ವೀಕಾರಕ್ಕೂ ಮೊದಲು | | | | ಬೌದ್ಧ ಧಮ್ಮ ಸ್ವೀಕಾರದ ನಂತರ | | | |
|---|---|---|---|---|---|---|---|---|
| | ಹೌದು | ಶೇ | ಇಲ್ಲ | ಶೇ | ಹೌದು | ಶೇ | ಇಲ್ಲ | ಶೇ |
| ಜೀವನ ನಿರ್ವಹಣೆಗಾಗಿ ಆರ್ಥಿಕ ಯೋಜನೆಯನ್ನು ಹಾಕಿಕೊಂಡಿದ್ದೀರಾ? | 22 | 44% | 28 | 56% | 31 | 62% | 19 | 38% |
| ನಿಮ್ಮ ಆದಾಯದ ಒಂದು ಪಾಲನ್ನು ಬಂಡವಾಳದಲ್ಲಿ ಹೂಡಿಕೆ ಮಾಡಿದ್ದೀರಾ? | 9 | 18% | 41 | 82% | 27 | 54% | 23 | 6% |
| ನಿಮ್ಮ ಆದಾಯದಲ್ಲಿ ಒಂದು ಪಾಲನ್ನು ತುರ್ತುನಿಧಿಯಾಗಿ ಇಟ್ಟಿದ್ದೀರಾ? | 13 | 26% | 37 | 74% | 29 | 58% | 21 | 42% |
| ನಿಮ್ಮ ಆದಾಯದಿಂದ ದಾನ ಮಾಡುತ್ತಿದ್ದೀರಾ? | 18 | 36% | 32 | 64% | 50 | 100% | 00 | 0% |
| ನೀವು ನಿರ್ವಹಿಸುವ ವೃತ್ತಿ ಬಗ್ಗೆ ತೃಪ್ತಿ ಇತ್ತೇ? | 27 | 54% | 23 | 46% | 38 | 76% | 12 | 24% |
| ನಿಮ್ಮ ವೃತ್ತಿಯಲ್ಲಿ ಪ್ರಾವಿಣ್ಯತೆಯನ್ನು ಗಳಿಸಿದ್ದೀರಾ? | 20 | 40% | 30 | 60% | 27 | 54% | 23 | 46% |
| ನಿಮ್ಮ ವೃತ್ತಿಯಿಂದ ಜೀವನ ನಿರ್ವಹಣೆ ಮಾಡಲು ಸಾಧ್ಯವಾಗಿದೆಯೇ? | 28 | 56% | 22 | 44% | 35 | 70% | 15 | 30% |

***ಮೂಲ: ಪ್ರಾಥಮಿಕ ಮಾಹಿತಿ***

ಈ ಮೇಲ್ಕಂಡ ಕೋಷ್ಟಕವನ್ನು ಗಮನಿಸಿದಾಗ ಬೌದ್ಧ ಧಮ್ಮ ಸ್ವೀಕಾರಕ್ಕೂ ಮೊದಲು 56% ಪ್ರತಿವರ್ತಿಗಳು ತಮ್ಮ ಜೀವನ ನಿರ್ವಹಣೆಗಾಗಿ ತಮ್ಮದೇ ಆದ ಆರ್ಥಿಕ ಯೋಜನೆಯನ್ನು ಹಾಕಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಮತ್ತು ತಮಗೆ ಬರುವ ಆದಾಯವನ್ನು ಬಂಡವಾಳದಲ್ಲಿ ತೊಡಗಿಸಿಕೊಳ್ಳುವಲ್ಲಿ 82% ಪ್ರತಿವರ್ತಿಗಳು ವಿಫಲರಾಗಿದ್ದಾರೆ. ತಮ್ಮ ಆದಾಯದಲ್ಲಿ ಒಂದು ಭಾಗವನ್ನು ತುರ್ತು ನಿಧಿಯಾಗಿ ಹಿಡುವಲ್ಲಿ 74% ಪ್ರತಿವರ್ತಿಗಳು ವಿಫಲರಾಗಿದ್ದಾರೆ. 36% ಸೂಚನಾದಾರರು ತಮ್ಮ ಆದಾಯದಲ್ಲಿ ಗಳಿಸಿದ್ದನ್ನು ದಾನ ಕಾರ್ಯಗಳಿಗೆ ಬಳಸುತ್ತಿರುವುದು ಕಂಡುಬಂದಿದೆ. ತಾವು ನಿರ್ವಹಿಸುತ್ತಿರುವ ವೃತ್ತಿಯ ಬಗ್ಗೆ 54% ಸೂಚನಾದಾರರು ಪ್ರಾವೀಣ್ಯತೆ ಹೊಂದಿದ್ದು. 60% ಸೂಚನಾದಾರರು ತಾವು ನಿರ್ವಹಿಸುವ ವೃತ್ತಿಯಲ್ಲಿ ಪ್ರಾವೀಣ್ಯತೆಗಳಿಸುವಲ್ಲಿ ವಿಫಲರಾಗಿದ್ದಾರೆ. 56% ಸೂಚನಾದಾರರು ವೃತ್ತಿಯಿಂದ ಜೀವನ ನಿರ್ವಹಣೆ ಮಾಡಲು ಸಾಧ್ಯವಾಗಿದೆ ಎಂದು ತಿಳಿಸಿರುವುದು ಕಂಡುಬಂದಿದೆ. ಬೌದ್ಧ ಧಮ್ಮ ಸ್ವೀಕಾರದ ನಂತರ ತಮ್ಮ ಜೀವನ ನಿರ್ವಹಣೆಗಾಗಿ ಆರ್ಥಿಕ ಯೋಜನೆಯನ್ನು ಹಾಕಿಕೊಂಡಿರುವ 62% ಸೂಚನಾದಾರರು ಕಂಡುಬಂದಿದ್ದಾರೆ. ತಮ್ಮ ಆದಾಯವನ್ನು ಬಂಡವಾಳ ಹೂಡಿಕೆಯಲ್ಲಿ ತೊಡಗಿಸಿರುವ 54% ಸೂಚನಾದಾರರು ಕಂಡುಬಂದಿದ್ದಾರೆ. ತಮ್ಮ ಆದಾಯದಲ್ಲಿ ಒಂದು ಪಾಲನ್ನು ತುರ್ತು ನಿಧಿಯಾಗಿ ಬಳಸುತ್ತಿರುವ 58% ಸೂಚನಾದಾರರು ಕಂಡುಬಂದಿದ್ದಾರೆ. 100% ಸೂಚನಾದಾರರು ತಾವು ಗಳಿಸಿದ ಆದಾಯದಲ್ಲಿ ದಾನವನ್ನು ಮಾಡುತ್ತಿರುವುದು ಕಂಡುಬಂದಿದೆ. 76% ಸೂಚನಾ ದಾರರು ತಾವು ನಿರ್ವಹಿಸುವ ವೃತ್ತಿಯ ಬಗ್ಗೆ ತೃಪ್ತಿಯನ್ನು ಹೊಂದಿದ್ದು 54% ಸೂಚನಾ ದಾರರು ತಮ್ಮ ವೃತ್ತಿಯಲ್ಲಿ ಪ್ರಾವೀಣ್ಯತೆ ಗಳಿಸಿರುವುದು ಕಂಡುಬಂದಿದೆ 70% ಸೂಚನಾದಾರರು ತಮ್ಮ ವೃತ್ತಿಯಿಂದ ಜೀವನ ನಿರ್ವಹಣೆ ಮಾಡಲು ಸಾಧ್ಯವಾಗಿದೆ ಎಂಬುದನ್ನು ತಿಳಿಸಿರುತ್ತಾರೆ. ಬುದ್ಧನು ನಾವು ಗಳಿಸುವ ಆದಾಯದ ವನ್ನು 4 ಭಾಗಗಳಾಗಿ ವಿಂಗಡಿಸಿ ಒಂದು ಭಾಗವನ್ನು ಜೀವನ ನಿರ್ವಹಣೆಗೆ ಇನ್ನೊಂದು ಭಾಗವನ್ನು ತುರ್ತು ನಿಧಿಯಾಗಿ ಹಾಗೂ ಉಳಿದ ಎರಡು ಭಾಗವನ್ನು ಬಂಡವಾಳದಲ್ಲಿ ಹೂಡಿಕೆ ಮಾಡಲು ತಿಳಿಸಿರುತ್ತಾರೆ. ಬುದ್ಧರ ಉಪದೇಶವನ್ನು ಉಪಾಸಕರು ಅನುಸರಿಸುವ ಮೂಲಕ ಕ್ರಮಬದ್ಧವಾದ ಆರ್ಥಿಕ ಜೀವನವನ್ನು ಕಟ್ಟಿಕೊಳ್ಳಲು ಸಾಧ್ಯವಾಗಿರುವುದು ಕಂಡುಬಂದಿದೆ.

**ಅಧ್ಯಯನದಿಂದ ಕಂಡುಕೊಂಡ ಅಂಶಗಳು**

- 62% ಬುದ್ಧ ಉಪಾಸಕರು ಆರ್ಥಿಕ ಜೀವನ ನಿರ್ವಹಣೆಗೆ ಯೋಜನೆ ಹಾಕಿಕೊಂಡಿರುವುದನ್ನು ಕಾಣಬಹುದು.
- ತಾವು ನಿರ್ವಹಿಸುವ ವೃತ್ತಿಯ ಬಗ್ಗೆ ಗೌರವ ಮನೋಭಾವನೆ ಹೊಂದಿರುವ ಕಂಡುಬಂದಿದೆ.
- ಬೌದ್ಧ ಧಮ್ಮ ಸ್ವೀಕಾರ ನಂತರ 100% ಸೂಚನಾದಾರರು ದಾನ ಕಾರ್ಯಗಳನ್ನು ಮಾಡುತ್ತಿರುವುದು ಕಂಡುಬಂದಿದೆ.
- ಬೌದ್ಧ ಧಮ್ಮ ಸ್ವೀಕಾರದ ನಂತರ ಅವರ ಆರ್ಥಿಕ ಜೀವನ ಶೈಲಿ ಬದಲಾವಣೆಯಾಗಿದೆ.

**ಸಲಹೆಗಳು**

- ಬೌದ್ಧ ಧಮ್ಮದ ನೀತಿಯಂತೆ ಬಂಡವಾಳ ಹೂಡಿಕೆಯಲ್ಲಿ ಬೌದ್ಧ ಉಪಾಸಕರು ತೊಡಗಿಕೊಳ್ಳಬೇಕು.
- ಬೌದ್ಧ ಉಪಾಸಕರು ತಾವು ನಿರ್ವಹಿಸುವ ವೃತ್ತಿಯಲ್ಲಿ ಪ್ರಾವೀಣ್ಯತೆಗಳಿಸುವುದು.
- ಆದಾಯದ ಒಂದು ಪಾಲನ್ನು ತುರ್ತು ನಿಧಿಯಾಗಿ ಮೀಸಲಿಡಬೇಕು.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಬೌದ್ಧ ಧಮ್ಮ ಸ್ವೀಕರಿಸಿದ ನಂತರ ಬೌದ್ಧ ಉಪಾಸಕರ ಆರ್ಥಿಕ ಜೀವನ ಮತ್ತು ವೃತ್ತಿಯಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ಕಾಣಬಹುದಾಗಿದ್ದು ಕ್ರಮಬದ್ಧವಾದ ಆರ್ಥಿಕ ಯೋಜನೆಯ ಮೂಲಕ ಆರ್ಥಿಕ ಜೀವನ ಶೈಲಿಯಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳಬಹುದು ಎಂಬುದನ್ನು ಕಂಡುಕೊಳ್ಳಲಾಗಿದೆ.

**ಪರಾಮರ್ಶನ ಗ್ರಂಥಗಳು**


- ತಾಳ್ತಜೆ ವಸಂತಕುಮಾರ. (2005). ಬೌದ್ಧಾಯನ. ಸಂಶೋಧನಾ ಗ್ರಂಥ, ಮುಂಬಯಿ ವಿಶ್ವವಿದ್ಯಾಲಯ.
- ಪೂಜ್ಯ ಧಮ್ಮಾನಂದ ಥೇರ. (2004). ಅನುವಾದಕರು ಡಾ. ರಾಜಾನಂದ ಮೂರ್ತಿ. ಬೌದ್ಧ ಸಂಸ್ಕೃತಿ ಮತ್ತು ಮೌಲ್ಯಗಳು. ಮಹಾಬೋಧಿ ಸೊಸೈಟಿ, ಬುದ್ಧವಚನ ಟ್ರಸ್ಟ್, ಬೆಂಗಳೂರು.
- ನಾಗಾರಾಜು ಎನ್. ಕೆ. (2016). ಬುದ್ಧ ಮತ್ತು ಅವನ ಧಮ್ಮ. ಮೂಲ: ಡಾ. ಬಿ. ಆರ್. ಅಂಬೇಡ್ಕರ್, ಬೌದ್ಧ ಸಂಸ್ಕೃತಿ ಅಧ್ಯಯನ ಕೇಂದ್ರ(ರಿ), ಹಾಸನ.
- ಪೂಜ್ಯ ಡಾ.ಕೆ.ಶ್ರೀ. ಧಮ್ಮಾನಂದ. (2008). ಬುದ್ಧ ಮತ್ತು ಧಮ್ಮದ ಪವಿತ್ರ ಗುಣಗಳು. ಅನುವಾದ: ಅನೀಶ್ ಭೋದ್. ಮಹಾಬೋಧಿ ಸೊಸೈಟಿ, ಬುದ್ಧವಚನ ಟ್ರಸ್ಟ್, ಬೆಂಗಳೂರು.
- Damien keown. Buddhism. (1951). Sterling publication, London.
- Kallolikar Anand. (2002). Socio religious change among dalits a case study of neo Buddhists.
- Naradatherra. (2010). Buddhism in a nutshell. Buddhist publication society, Colombo(Sri Lanka).
- Naik C. D. (2010). Buddhism and Dalits Social Philosophy and Traditions, Kalpaz Publications, Delhi.